"ಏನು ಹೇಳ್ತಿದ್ದೀಯ, ಸರಿತಾ? ಇದು ನಡೆದು ಮೂವತ್ತೈದಕ್ಕೂ ಹೆಚ್ಚು ವರ್ಷಗಳಾದವು."

ಸರಿತಾ ಸೋಫಾದಲ್ಲಿ ಸ್ವಲ್ಪ ಆರಾಮಾಗಿ ಕೂತು ಹೇಳಿದಳು, "ಅದು ನನ್ನ ಲೈಫಿನ ಅತಿ ಸುಂದರ ಸಮಯವಾಗಿತ್ತು, ನಾನು ಕ್ವೀನ್ ಆಗಿದ್ದೆ. ನಾನು ಹೇಳಿದ್ದು ಈಡೇರುವುದೆಂದು ನನಗೆ ಅನ್ನಿಸುತ್ತಿತ್ತು."

"ಆಗ ನಾವು ಯುವಕರಾಗಿದ್ದೆವು ಸರಿತಾ, ಎಲ್ಲರಿಗೂ ಹೀಗೆಯೇ ಅನ್ನಿಸುತ್ತಿತ್ತು. ನಮಗೆ ಆಗ ಯಾವುದೇ ಜವಾಬ್ದಾರಿಗಳಿರಲಿಲ್ಲ, ಹುಡುಗತನ ಮಾತ್ರವಿತ್ತು... ಜಗತ್ತಿನ ಸಿದ್ಧಾಂತಗಳ ಅರಿವು ನಮಗಿರಲಿಲ್ಲ."

"ಸಿದ್ಧಾಂತ... ಸರಿಯಾದ ಮಾತನ್ನೇ ಹೇಳಿದೆ. ನಮ್ಮೆಲ್ಲರ ಮಿಡಲ್ ಕ್ಲಾಸ್ ಕನಸುಗಳು... ನೀವೆಲ್ಲರೂ ಕಾಲೇಜು ವಿದ್ಯಾಭ್ಯಾಸದ ನಂತರ ಮುಂದಕ್ಕೆ ಹೋದಿರಿ, ಹಿಂದೆ ಏನು ಬಿಟ್ಟು ಹೋಗಿದ್ದೀರೆಂದು ನೋಡಲೇ ಇಲ್ಲ."

ನನ್ನ ಮುಖದಲ್ಲಿ ಪ್ರಶ್ನೆಯೊಂದು ಮೂಡಿತು, "ನಾವೆಲ್ಲರು ಮುಂದೆ ಹೋಗಲೇಬೇಕಿತ್ತಲ್ಲ, ಕಾಲೇಜಿನ ದಿನಗಳನ್ನು ಹಿಡಿದುಕೊಂಡು ನಿಲ್ಲಲು ಹೇಗೆ ಸಾಧ್ಯವಿತ್ತು?"

"ನನ್ನ ಮಾತು ಅರ್ಥವಾಗಲಿಲ್ಲವೇ? ಉದಯ್... ಸ್ವಲ್ಪ ನನ್ನ ಕಡೆಗೆ ನೋಡು. ನೀವೆಲ್ಲಾ ಹುಡುಗರು ನನ್ನ ಒಂದು ದೃಷ್ಟಿಗಾಗಿ, ನನ್ನ ಜೊತೆಯಲ್ಲಿ ಕಾಫಿ ಕುಡಿಯುವುದಕ್ಕಾಗಿ ತವಕಿಸುತ್ತಿದ್ದೀರಿ. ಯಾರು, ಎಷ್ಟು ಹೊತ್ತು ಸರಿತಾಳೊಂದಿಗೆ ಕೂರುವರು ಎಂಬ ಬಗ್ಗೆ ಬೆಟ್ ಹಾಕುತ್ತಿದ್ದೀರಿ. ನಾನಾಗ ಕಾಲೇಜಿನ ಬಾಂಬ್ ಶೆಲ್ ಆಗಿದ್ದೆ. ಈಗ ನೋಡು, ನನ್ನ ಅವಸ್ಥೆ ಏನಾಗಿದೆ?..."

ನಾನು ತಡವರಿಸುತ್ತಾ, ಸಂಕೋಚಿಸುತ್ತಾ ಹೇಳಿದೆ, "ಈ ಅವಸ್ಥೆಯನ್ನು ನೀನೇ ಮಾಡಿಕೊಂಡಿದ್ದೀಯ. ಕಡೇ ಪಕ್ಷ ನಿನ್ನ ಯೋಚನೆಗಳು ಮಾಡ್ರನ್ ಆಗಿರುವಂತೆ ನೋಡಿಕೊಂಡಿರಬೇಕಿತ್ತು..."

ಅವಳು ಸ್ವಲ್ಪ ಗದರುತ್ತಾ, ಭಾವುಕಳಾಗಿ ಹೇಳಿದಳು, "ನೀನು ಇಂಥ ಮಾತನ್ನು ಯಾಕೆ ಹೇಳ್ತಿದ್ದೀಯ? ನಿನ್ನದೂ ಅರೇಂಜ್ಡ್ ಮ್ಯಾರೇಜ್ ತಾನೇ? ನಿನ್ನ ತಾಯಿ ಹೇಳಿದ ಮಾತನ್ನು ಕೇಳಿದೆ. ಮನಸಾರೆ ವರದಕ್ಷಿಣೆಯನ್ನೂ ಕೊಟ್ಟರು ಎಂದು ಕೇಳಿದ್ದೆ. ನೀನೂ ಸಹ ಪಿಂಕಿಗೆ ಲೈನ್ ಹೊಡೀತಿದ್ದೆ, ನನ್ನ ಮೇಲೆ ನಿನಗೆ ಮನಸ್ಸಿತ್ತು. ಆದರೂ ಮದುವೆಯ ಸಮಯದಲ್ಲಿ ನಾವಿಬ್ಬರು ನಿನಗೆ ಯಾಕೆ ನೆನಪಾಗಲಿಲ್ಲ? ಓಹೋ, ಎದೆ ಅಗಲಿಸಿಕೊಂಡು ನನ್ನ ಬಾಯ್ ಫ್ರೆಂಡ್ ಬಗ್ಗೆ ನೀನು ಹೇಳಿದ್ದೆ. ಎಲ್ಲರೂ ಎಲ್ಲಿಗೆ ಹೋದರು? ಕಾಲೇಜು ಮುಗಿಯಿತು, ಲವ್ ಸಹ ಫಿನಿಶ್ಡ್!"

ಸರಿತಾ ಸ್ವಲ್ಪ ತಡೆದು ಮತ್ತೆ ಹೇಳಿದಳು, "ಇವಳು ಚೀಪ್ ಟೈಪಿನ ಹುಡುಗಿ, ಲೂಸ್ ಕ್ಯಾರೆಕ್ಟರ್‌ನವಳು, ಹುಡುಗರೊಂದಿಗೆ ಅಲೀತಾಳೆ, ಇವಳು ಬಿಂದಾಸ್ ಹುಡುಗಿ ಎಂದು ನನಗೆ ಕಳಂಕ ಹತ್ತಿತು. ನನ್ನ ಮದುವೆಗೆ ತುಂಬಾ ಪ್ರಾಬ್ಲಮ್ಸ್ ಎದುರಾದವು. ಕಡೆಗೆ ದೂರದ ಸಂಬಂಧಿಕರೊಬ್ಬರು ಮದುವೆ ಬಗ್ಗೆ ಪ್ರಸ್ತಾಪಿಸಿದರು."

ಸರಿತಾಳ ಗಂಟಲು ಒತ್ತಿ ಬಂತು. ನಾನೇ ಅಡುಗೆ ಮನೆಗೆ ಹೋಗಿ ನೀರು ತಂದೆ. ನೀರು ಕುಡಿದು ಅವಳು ಸ್ವಲ್ಪ ಚೇತರಿಸಿಕೊಂಡಳು. ನನ್ನ ಮುಖದಲ್ಲೂ ಒಳ್ಳೆತನದ ಸ್ಮೈಲ್ ಮೂಡಿತು.

"ಸರಿತಾ, ನೀನು ತುಂಬಾ ಬೋಲ್ಡ್ ಮತ್ತು ಬಿಂದಾಸ್ ಆಗಿದ್ದೀಯ..."

ಅವಳು ನಡುವೆ ಬಾಯಿ ಹಾಕಿ ನನ್ನ ಮಾತನ್ನು ತಡೆದಳು, "ಈಗಲೂ ನಾನು ಹಾಗೆಯೇ ಇದ್ದೇನೆ. ಒರಟಾಗಿಯೇ ಇರುತ್ತೇನೆ. ನಾನು ಹೀಗಿರದಿದ್ದರೆ, ನಾನು ಬದುಕಿರಲು ಯಾರೂ